**OS: 158/2016**
**PW-2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ 06.11.2019
ಮುಖ್ಯ ವಿಚಾರಣೆಃ ಶ್ರೀ ಸಿ. ಎಸ್. ಹೆಚ್. ವಾದಿ ಪರ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿರುತ್ತೇನೆ.

ಖರೀದಿ ಅಡವಾನ್ಸ ಪಾವತಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದೆ. ಸದರಿ ದಾಖಲೆಯ ಇಂಗ್ಲೀಷ್ ತರ್ಜುಮೆಯನ್ನು ನಿಪಿ–2 ಎಂದು ಈಗಾಗಲೇ ಗುರುತಿಸಲಾಗಿದೆ. ನನ್ನ ತಂದೆ ಮತ್ತು ಪ್ರತಿವಾದಿಯ ಮಧ್ಯೆ ಆದಂತಹ ಕರಾರು ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದೆ. ಸದರಿ ದಾಖಲೆಯ ಇಂಗ್ಲೀಷ್ ತರ್ಜುಮೆಯನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದೆ. ದಾವಾ ಆಸ್ತಿಗೆ ಸಂಬಂಧಪಟ್ಟ ಕಾಡುಕೂಡೆ *Extract* ನ ದೃಢಿಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ಈಗಾಗಲೇ ನಿಪಿ–5 ಎಂದು ಗುರುತಿಸಲಾಗಿದೆ. ದಾವಾ ಆಸ್ತಿಗೆ ಸಂಬಂಧಿಸಿದ ನಕಾಶೆಯನ್ನು ಹಾಜರು ಮಾಡಿದ್ದು ಅದನ್ನು ಈಗಾಗಲೇ ನಿಪಿ–6 ಎಂದು ಗುರುತಿಸಲಾಗಿದೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದ ಎರಡು ಪ್ರಾಪರ್ಟಿ ರಜಿಸ್ಟರ ಕಾರ್ಡ್ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈಗಾಗಲೇ ನಿಪಿ–7 ಮತ್ತು ನಿಪಿ–8 ಎಂದು ಗುರುತಿಸಲಾಗಿದೆ. ನನ್ನ ವಕೀಲರ ಮುಖಾಂತರ ಪ್ರತಿವಾದಿಯರಿಗೆ ನೀಡಿದಂತಹ ಕಾನೂನು ತಿಳುವಳಿಕೆ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು ಈಗಾಗಲೇ ನಿಪಿ–9 ಎಂದು ಗುರುತಿಸಲಾಗಿದೆ. 7 ಅಂಚೆ ರಶೀದಿ ಮತ್ತು 7 ಅಂಚೆ ಸ್ವೀಕೃತಿ ಪ್ರತಿಯನ್ನು

**OS: 158/2016**
**PW-2**

ಹಾಜರು ಮಾಡಿದ್ದು ಅವುಗಳನ್ನು ಈಗಾಗಲೇ ಅನುಕ್ರಮವಾಗಿ ನಿಪಿ–10 ರಿಂದ ನಿಪಿ–23 ಎಂದು ಗುರುತಿಸಲಾಗಿದೆ. ಪ್ರತಿವಾದಿಯರಿಂದ ನನ್ನ ವಕೀಲರಿಗೆ ಬಂದಂತಹ 2 ರೀಪ್ಲಾಯ ನೋಟಿಸಿನ ಪ್ರತಿಯನ್ನು ಈಗಾಗಲೇ ನಿಪಿ–24 ಮತ್ತು ನಿಪಿ–25 ಎಂದು ಗುರುತಿಸಲಾಗಿದೆ. 2 ವಿದ್ಯುತ್ ರಶೀದಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ–26 ಮತ್ತು ನಿಪಿ–27 ಈಗಾಗಲೇ ಎಂದು ಗುರುತಿಸಲಾಗಿದೆ. ನನ್ನ ತಂದೆಯ ಗುರುತಿನ ಚೀಟಿಯನ್ನು ಹಾಜರು ಮಾಡಿದ್ದು ಅದನ್ನು ಈಗಾಗಲೇ ನಿಪಿ–28 ಎಂದು ಗುರುತಿಸಲಾಗಿದೆ. ನನ್ನ ತಂದೆ ನನ್ನ ಹೆಸರಿಗೆ ಬರೆದುಕೊಟ್ಟಂತಹ ಮುಕ್ತಿಯಾರ ನಾಮೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–29 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆ. ನ್ಯಾ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ., ಬೆಳಗಾವಿ.